ಬೆಂಗಳೂರು ಡಿಸ್ಪೆನ್ಸರಿ.

1906ನೆ ಇಸವಿ ಡಿಸೆಂಬರ್ 3ನೆ ತಾರೀಖಿನಲ್ಲಿ ನಡೆದ ಬೆಂಗಳೂರು ಡಿಸ್ಪೆನ್ಸರಿ ಫಂಡು ಬೋರ್ಡು ಪ್ರೊಸೀಡಿಂಗ್ಸು.

ಹಾಜರು.

ಅಫಿಷಿಯಲ್ ಮೆಂಬರುಗಳು.

1. ಡಪ್ಯುಟಿ ಕಮಿಷನರವರು ಮತ್ತು ಪ್ರೆಸಿಡೆಂಬರು—H. Li. ಸ್ಪಾರ್ಕ್ಸ್ ಸಾಹೇಬರವರು, ಎಸ್ಕ್ವಯರ್.
2. ಬೆಂಗಳೂರು ಡಿವೀಜ್ ಸಬ್ ಡಿವೀಜ್ ಆಫಿಸರು—ಮೆ॥ ಪಿ. ಶ್ರೀನಿವಾಸಾವ್.
3. ದೊಡ್ಡಬಳ್ಳಾಪುರ ಡಿವೀಜ್ ಸಬ್ ಡಿವೀಜ್ ಆಫಿಸರು—ಮೆ॥ ಕೆ. ಆರ್. ಶ್ರೀನಿವಾಸ ಐಯ್ಯಂಗಾರು.
4. ಕೋಲಾರ ಪೇಟೆ ಡಿವೀಜ್ ಸಬ್ ಡಿವೀಜ್ ಆಫಿಸರು—ಮೆ॥ ಸಿ. ದೇವರಾಜ ಅರಸಿನವರು.
5. ಡಿಸ್ಪೆನ್ಸ್ಯ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು—ಮೆ॥ E. S. ಕೃಷ್ಣಸ್ವಾಮಿ ಐಯ್ಯರವರು.
6. ಎಗ್ಸಿಕ್ಯೂಟಿವ್ ಇಂಜನೀಯರವರು—ಮೆ॥ ಬಿ. ಎಸ್. ವೆಂಕಟಾಚಾರು.
7. ಸ್ಕೂಲ್‌ಗಳ ಡಿಪ್ಯುಟಿ ಇನ್‌ಸ್ಪೆಕ್ಟರವರು—ಮೆ॥ ವೀರಭದ್ರಪ್ಪನವರು.

ಗೈರ್ ಹಾಜರು.

1. ವೈಸ್ ಪ್ರಿನ್ಸಿಪಾಲರು ಸೆಂಟ್ರಲ್ ಕಾಲೇಜು ಡಿಸಿಪ್ಲಿನೆರ್ಯ ಕೇಸಿನಲ್ಲಿ ಸಿಟಿ ಮಾಜಿಸ್ಟ್ರೇಟು ಕೋರ್ಟಿಗೆ ಸಾಕ್ಷಿ ಕೊಡಿಗೆ ಹೋಗಬೇಕಾದ ಸಬಬು—ಮೆ॥ ರಾಯಲ್ ಕೆಟ್ಸರು.

ನಾನ್ ಅಫಿಷಿಯಲ್ ಮೆಂಬರುಗಳು.

ಹಾಜರು.

1. ಮೆ॥ ವೇಲುವೊವಲಿಯಾರು.
2. ,, ಕಂಗಿರಿಯಪ್ಪನವರು.
3. ,, ದಾಸಪ್ಪನವರು.
4. ,, ಯಾಲಕ್ಕಿಗೌಡರು.
5. ,, ಕರ್ನಿಕ ಕೃಷ್ಣಮೂರ್ತಿರಾಯ್ಯರು.
6. ,, ಕರಭಾಮಾ ನರಸಿಂಹೈಯ್ಯನವರು.
7. ,, ಸಾಹುಕಾರ್ ಮಸ್ತ್ ಸಾಹೇಬರವರು.
8. ,, ಕೆ. ಪುಟ್ಟಪ್ಪನವರು.
9. ,, ಡಿ. ಶ್ಯಾಕಂಠಯ್ಯರು.
10. ,, ಕೆ. ಸುಬ್ಬರಾಯನವರು.
11. ,, ಶ್ಯಾ॥ ಶೀನಪ್ಪನವರು.

ಗೈರ್ ಹಾಜರು.

1. ಮೆ॥ ಪುಟ್ಟಮಾಸ್ತಿಗೌಡರು, ಖಾಯಿಲೆ ಸಬಬು.
2. ,, ಬಾಳಾ ರಾಯರು, ಸಮಜಾಯಿಷಿ ಕೇಳಿದ.
3. ,, ಜೋಡಿದಾರ್ ರಾಮಚಂದ್ರಪ್ಪನವರು, ಸಮಜಾಯಿಷಿ ಕೇಳಿದ.
4. ,, ಗಾಸುಖಾನಾಬರು, ಫವತಿ.
5. ,, ನಂದುಗುಡಿ ರಾಮಣ್ಣನವರು, ಫವತಿ.
6. ,, ಪಿ. ಥಾರ್ಪ್, ವೈಟ್ ಫೀಲ್ಡಿನಲ್ಲಿ ಗೈರ್ ಹಾಜರು ಸಬಬು.

1. ಬೆಂಗಳೂರು ತಾಲ್ಲೂಕು ದೇವರಜೀವನಹಳ್ಳಿ ತೋಲುಷಾಪು ವಿಚಾರದಲ್ಲಿ ಡಿಸ್ಪೆನ್ಸರಿ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು ಅಜಮಾಯಿಷಿಯಿಂದ ಒರದ ನೋಟ್ಸು ಕಳುಹಿಸಿ ಡಿಜೋ ಷಾಪು ಕಟ್ಟಡದಲ್ಲಿರತಕ್ಕ ನ್ಯೂನತೆಗಳನ್ನು ಕ್ರಮಪಡಿಸಬೇಕೆಂತಲೂ ಮತ್ತು ಆ ಷಾಪನ್ನು ಗ್ರಾಮದಿಂದ ಆಚೆ ತೆಗದುಹಾಕಲು ಅನುಕೂಲವೇ ಯಾ ಇಲ್ಲವೆ ಎಂಬುವ ವಿಚಾರದಲ್ಲಿ ತಾಲ್ಲೂಕು ಬೋರ್ಡು ಮತ್ತು ಡಿಸ್ಪೆನ್ಸರಿ ಬೋರ್ಡುಗಳ ತೀರ್ಮಾನ ಕಳುಹಿಸಬೇಕೆಂತಲೂ ಸಹ ರೆವಿನ್ಯೂ ಮತ್ತು ಜನರಲ್ ಸೆಕ್ರಿಟರಿ ಸಾಹೇಬರವರಿಂದ ತಲ್ಪಿದ 1905ನೆ ಸೆಪ್ಟಂಬರ್ 1ನೆ ಮಕ್ಕಂ 2261ನೆ ನಂಬರ್ ಡಾಕೆಟ್ಟು ಓದಲಾಯಿತು.

ಇದನ್ನು ಅಜಮಾಯಿಷಿ ಮಾಡಿ ಇನ್ನೊಂದು ಮೀಟಿಂಗಿನಲ್ಲಿ ಸಾವಕಾಶ ಹೊಸ ನಮೂನೆ ವಿಚಾರದಲ್ಲಿ ಅಭಿಪ್ರಾಯ ಕಳುಹಿಸತಕ್ಕದ್ದೆಂದು ಕಮಿಟಿ ವಿರ್ಣಾಯ ಪೂರ್ವಬೇಕೆಂದು ತೀರ್ಮಾನ ಮಾಡಲಾಯಿತು.

2. ಮಿಲಿಟರಿ ಅಸಿಸ್ಟೆಂಟು ಸಾಹೇಬರವರು ಹೆಸನಪೇಟೆಯಲ್ಲಿ ಹೊಸದಾಗಿ ಪುಲ್ಲು ಕಾಜಲನಲ್ಲಿ 4 ದೊಡ್ಡ ಮನೆ ಸ್ಥಾಪಿಸಿಕೊಳ್ಳುವದಕ್ಕೂ ಮತ್ತು ಡಿಜೋ ದೊಡ್ಡ ಮನೆಗಳನ್ನು ಪಟೇಲರುಗಳ ಆಡಳಿತದಲ್ಲಿ ಕೊಡುವದಕ್ಕೆ ಬದಲಾಗಿ ತಮ್ಮ ಭಾರಂ ಅಸಿಸ್ಟೆಂಟರ ಆಡಳಿತದಲ್ಲಿ ಬಿಡತಕ್ಕ ಭಾಗದಲ್ಲಿ ಮಂಜೂರಿ ಹುಕುಂ ಕೊಡಿಸಬೇಕೆಂದು ಗವರ್ನ್‌ಮೆಂಟಿಗೆ ಒರದುಕ್ಕೊಂಡ 1906ನೆ ಸೆಪ್ಟಂಬರ್ 17ನ ಮಕ್ಕಂ 1220ನೆ ನಂಬರು ಲೆಟರು ಕಾಪಿಯನ್ನು ಕಳುಹಿಸಿಕೊಟ್ಟು ಈ ವಿಚಾರದಲ್ಲಿ ಬೋರ್ಡಿನವರ ತೀರ್ಮಾನವೊಂದನ್ನು ಪ್ರೆಸಿ

ಡೆಂಟರ ಅಭಿಪ್ರಾಯ ಕಳುಹಿಸಿಕೊಡಬೇಕೆಂದು ಸ್ಪೆ॥ ಸ್ಟಾಫೇಬರವರಿಂದ ಬರಿಸಿದ 1906ನೆ ಅಕ್ಟೋಬರ್ 25ನೆ ಮುಕ್ಕಂ 3101—L. B. (120-6) ನೆ ನಂಬರು ಡಾಕೆಟ್ಟು ಓದಲಾಯಿತು.

ಬೋರ್ಡಿನವರು, ಪೈಸಿಡೆಂಟರವರು 2 ದೊಡ್ಡಿ ಮನೆಗಳು ಸ್ಥಾಪಿಸಿಕೊಳ್ಳಬೇಕೆಂದು ಬರಿಸಿರುವದೇ ಸಾಕೆಂತಲೂ ಹೆಚ್ಚಾಗಿ ಅವಶ್ಯಕವಿಲ್ಲವೆಂತಲೂ ಇವುಗಳ ಆಡಳಿತವನ್ನು ರವಿನ್ಯೂ ಆಫೀಸರುಗಳೂ ಆಥಾಗ್ಯೇ ಅಜಮಾಯಿಷಿ ಮಾಡುವ ದಕ್ಕೆ ಅನುಕೂಲವಾಗಿ ಪಟೇಲರುಗಳ ತನಿಖೆಗೆ ಕೊಡಿಸಬೇಕೆಂದು ಅಭಿಪ್ರಾಯಪಟ್ಟರು.

3. ಬೆಂಗಳೂರು ಡಿವೀರ್ಜ್ ಎಕ್ಸಿಕ್ಯೂಟಿವ್ ಇಂಜನಿಯರ್ ಗುಬ್ಬಿವಾರ್ನ ಹಳ್ಳಿ-ಮಾಗಡಿ ರಸ್ತೆಯನ್ನು ಸ್ಪೆಷಲ್ ಫಂಡಿನಿಂದ ಇಂಪ್ರೂವ್ ಮಾಡತಕ್ಕದ್ದು ಯುಕ್ತವೆ ಯಾ ಅಲ್ಲವೆ? ಎಂಬ ವಿಚಾರದಲ್ಲಿ ಅಭಿಪ್ರಾಯ ತಿಳಿಸಬೇಕೆಂದು ಬರಿಸಿದ 1906ನೆ ಅಕ್ಟೋಬರ್ 8ನೆ ಮುಕ್ಕಂ 4401-1255ನೆ ನಂಬರು ಡಾಕೆಟ್ಟು ಓದಲಾಯಿತು.

ಇದಕ್ಕಾಗಿ ಈ ವರುಷ ಸ್ಪೆಷಲ್ ಗ್ರಾಂಟು 390 ರೂಪಾಯಿಗಳು ಕೊಡಬೇಕೆಂದು ತೀರ್ಮಾನವಾಯಿತು.

4. ಕಾರ್ಕಾರ್‌ಹಳ್ಳಿ ತಾಲ್ಲೂಕು ಚಿಕ್ಕಮರಳವಾಡಿಲಿ ಒಂದು ನೇಟಿವ್ ವೈದ್ಯಶಾಲೆ ಸ್ಥಾಪಿಸಲು ಆಗಲಾರದೆಂದು ಬಂದ 1906ನೆ ನವಂಬರು 2ನೆ ಮುಕ್ಕಂ 3445-6—L. B.—(2-06)—4ನೆ ನಂಬರು ಪ್ರೊಸಿಡಿಂಗ್ಸು ಓದಲಾಯಿತು.

ರಿಕಾರ್ಡು ಮಾಡಲಾಯಿತು.

5. ಸೂಲಗಿತ್ತಿಯರು ಗ್ರಾಮಾಂತರಗಳಿಗೆ ಹೆರಿಗೆ ಕೆಲಸ ನಡಿಸಲು ಹೋಗತಕ್ಕ ವಿಚಾರದಲ್ಲಿ ಹಾಲಿ ಇರತಕ್ಕ ಏರ್ಪಾಡುಗಳು ಸಮರ್ಪಕವಿಲ್ಲವೆಂತಲೂ ಆದ್ದರಿಂದ ಅವರು ತಾಲ್ಲೂಕು ಕಸಬ ಬಿಟ್ಟು ಇತರ ಸ್ಥಳಗಳಿಗೆ ಹೆರಿಗೆ ಕೆಲಸಕ್ಕೆ ಹೋಗಲು ತಗಲುವ ಪ್ರಯಾಣದ ಖರ್ಚಿಗೆ ಮೈಲೇಜು ಕೊಡಬೇಕೆಂದು ಸಿಫಾರಸ್ಸು ಮಾಡಿ ಸೀನಿಯರ್ ಸರ್ಜ್ಯನ್ ಸಾಹೇಬರವರು ಗವರ್ನಮೆಂಟಿಗೆ ಬರಿಸಿದ 1906ನೆ ಇಸವಿ ಜೂನ್ 6ನೆ ಮುಕ್ಕಂ 920ನೆ ನಂಬರು ಲೆಟರು ಕಾಪಿ ಕಳುಹಿಸಿಕೊಟ್ಟು ಈ ವಿಚಾರವನ್ನು ಬೋರ್ಡಿನಲ್ಲಿ ಚರ್ಚಿಸಿ ಬೋರ್ಡಿನ ತೀರ್ಮಾನವನ್ನು ಪೈಸಿಡೆಂಟರ ಅಭಿಪ್ರಾಯದ ಒಡನೆ ಕಳುಹಿಸಿಕೊಡಬೇಕೆಂದು ತಲ್ಪಿದ 1906ನೆ ನವಂಬರು 2ನೆ ಮುಕ್ಕಂ 3455-65—Med. (297-05)—4ನೆ ನಂಬರು ಗವರ್ನಮೆಂಟು ಪ್ರೊಸಿಡಿಂಗ್ಸು ಓದಲಾಯಿತು.

ಮುನಿಸಿಪಲ್ ಸರಹದ್ದಿನಿಂದ ಒಂದು ಮೈಲಿಗಿಂತ ಜಾಸ್ತಿಯಾಗಿ ಪ್ರಯಾಣಮಾಡಿದಾಗೆಲ್ಲಾ ಮೈಲಿ 1ಕ್ಕೆ ದರ 0—1—6 ವೀರೆ ಮೈಲೇಜುಯಾನೆ ಭತ್ಯ ಕೊಡಲು ಅವಕಾಶ ಮಾಡಬಹುದೆಂತಲೂ, ಹಾಗೆ ಬಾಡಿಗೆಮಾಡಿಕೊಂಡು ಹೋದಾಗೆಲ್ಲಾ ಆ ಅಂಶಕ್ಕೆ ಪಟೇಲನ ಸರ್ಟಿಫಿಕೇಟಿನಿಕಿ ಬಿಲ್ ಮಾಡಿದರೆ ಒಪ್ಪತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

6. ಕೆಲವು ಸ್ಥಳಗಳಲ್ಲಿ ಬ್ರಾಂಚ್ ಡಿಸ್ಪೆನ್ಸರಿಗಳನ್ನು ಸ್ಥಾಪಿಸತಕ್ಕ ವಿಚಾರ ಬೋರ್ಡಿನಲ್ಲಿ ಚರ್ಚಿಸಿ ಇಂಥಾ ಡಿಸ್ಪೆನ್ಸರಿಗಳನ್ನು ಸ್ಥಾಪಿಸುವದು ಎಷ್ಟರಮಟ್ಟಿಗೆ ಉಪಯೋಗವೆಂಬುವ ಭಾಗವನ್ನು ಮತ್ತು ಇದಕ್ಕಾಗಿ ತಗಲುವ ನಿಬ್ಬಂದಿ ಮತ್ತು ಅವು ಷಧಿ ಖರ್ಚುಗಳನ್ನು ವಹಿಸಲು ಒಪ್ಪುತ್ತಾರೆಯೋ ಎಂಬ ಭಾಗವನ್ನು ಸಹ ಆಲೋಚಿಸಿ ಆವರ ತೀರ್ಮಾನವನ್ನು ಪೈಸಿಡೆಂಟ್ ಸಾಹೇಬರವರ ಅಭಿಪ್ರಾಯದ ಒಡನೆ ಕಳುಹಿಸಬೇಕೆಂದು ಬರಿಸಿದ 1906ನೆ ಮುಕ್ಕಂ ನೆನೆ ನವಂಬರು 3631-21-Med. (97-06)—2ನೆ ನಂಬರು ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಲಾಯಿತು.

ಹಾಸ್ಪಿಟಲ್ ಅಸಿಸ್ಟೆಂಟರವರು ಇದರೊಡನೆ ಕಳುಹಿಸಿರುವ * ತಾಜಾ ತಟ್ಟೆಲಿ ಕಂಡ ಗ್ರಾಮಗಳಿಗೆ ವಾರಕ್ಕೆ ಬಂದಾವರ್ತಿ ಹೋಗಬೇಕೆಂತಲೂ ಇದಕ್ಕಾಗಿ ತಗಲುವ ಅವುಷಧಿ ಖರ್ಚು ಕೊಡಲು ಒಪ್ಪುವದಾಗಿಯೂ, ಡಿಟೋ ಹಾಸ್ಪಿಟಲ್ ಅಸಿಸ್ಟೆಂಟರುಗಳು ಅವರ ಜೊತೆಲಿ ಕಾಂಪೌಂಡರನ್ನು ಕರದುಕೊಂಡುಹೋದರೆ ಸಾಕೆಂತಲೂ, ಹೆಚ್ಚು ನಿಬ್ಬಂದಿ ಅನಾವಶ್ಯಕವೆಂತಲೂ, ಜೊತೆಲಿ ಕರದುಕೊಂಡುಹೋಗುವ ಕಾಂಪೌಂಡರ ಪ್ರಯಾಣದ ಖರ್ಚು ಸಹ ಕೊಡಲು ಒಪ್ಪುವದಾಗಿಯೂ ಸಹ ತೀರ್ಮಾನಿಸಲಾಯಿತು.

* ಹೊಸಕೋಟೆ ಹಾಸ್ಪಿಟಲ್ ಅಸಿಸ್ಟೆಂಟರು, ಸೂಲಬೆಲೆಗೂ.

ವರ್ತೂರು	ಡಿಟೋ	ವೈಟ್‌ಫೀಲ್ಡಿಗೂ ಮತ್ತು ಸರ್ಜಾಪುರಕ್ಕೂ.
ನೆಲಮಂಗಲ	ಡಿಟೋ	ಸೊಂಡೆಕೊಪ್ಪಕ್ಕು.
ದೊಡ್ಡಬಳ್ಳಾಪುರ	ಡಿಟೋ	ದೊಡ್ಡಬೆಳವಂಗಲಕ್ಕು.
ಮಾಗಡಿ	ಡಿಟೋ	ಚಕ್ಕಭಾವಿಗೂ.
ಚೆನ್ನಪಟ್ಟಣ	ಡಿಟೋ	ನಿಂಗರಾಜಪುರಕ್ಕು.
ಕಾರ್ಕಾರ್‌ಹಳ್ಳಿ	ಡಿಟೋ	ಹಾರೋಹಳ್ಳಿಗೂ.
ಕೋಲಾರ್ ಟೌನ್	ಡಿಟೋ	ಬಿಡದಿಗೂ.
ದೇವನಹಳ್ಳಿ	ಡಿಟೋ	ಬೂದಿಗೆರೆ.
ಆನೇಕಲ್	ಡಿಟೋ	ಜಿಗಣಿ.
ಎಲಹಂಕ	ಡಿಟೋ	ಬಾಗಲೂರು.

7. ವರ್ತೂರಲ್ಲಿದ್ದ ಆಸ್ಪತ್ರೆಯನ್ನು ಹಂಗಾಮಿಯಾಗಿ ವೈಟ್‌ಫೀಲ್ಡಿನಲ್ಲಿಟ್ಟು ವಿಚಾರ ಡಿಸ್ಪೆನ್ಸರಿಕ್ಕು ಬೋರ್ಡಿನವರ ಅಭಿಪ್ರಾಯ ತಿಳಿಸಲು ಪೈಸಿಡೆಂಟರಿಗೆ ಬರಿಸಿ ಈ ವಿಚಾರದಲ್ಲಿ ಪುನಹ ರಿಪೋರ್ಟು ಸೀನಿಯರ್ ಸರ್ಜ್ಯನ್ ಸಾಹೇಬರವರು ಮಾಡಬೇಕೆಂದು ತಲ್ಪಿದ 1906ನೆ ಮುಕ್ಕಂ 21ನೆ ನವಂಬರು 4199-201—L. F. (165-06)—2ನೆ ನಂಬರು ಗವರ್ನಮೆಂಟ್ ಪ್ರೊಸಿಡಿಂಗ್ಸು ಓದಲಾಯಿತು.

ವರ್ತೂರಲ್ಲಿ ಪ್ಲೇಗು ಪ್ರಾಪ್ತವಾದ ಸುಬು ಹಂಗಾಮಿಯಾಗಿ ಆಸ್ಪತ್ರೆಯನ್ನು ವೈಟ್‌ಫೀಲ್ಡಿನಲ್ಲಿ ಇಡಿಸಿದ ಭಾಗದಲ್ಲಿ ಬೋರ್ಡಿನವರ ಅಡ್ಡಿಯೇನೂ ಇಲ್ಲವೆಂತಲೂ ಪ್ಲೇಗು ಶಮನವಾದ ಒಡನೆ ಪುನಹ ವರ್ತೂರಲ್ಲಿಯೇ ಇಡಿಸಬೇಕೆಂತಲೂ

18. ಸೂಪರಿಂಟೆಂಡಿಂಗು ಇಂಜನಿಯರಿಂದ ತಲ್ಪಿದ 1906ನೆ ನವಂಬರ್ 20ನೆ ಮಕ್ರುಂ 6581ನೆ ನಂಬರ್ ಲೆಟರಿನಲ್ಲಿ ಹೊಸಕೋಟೆ ಕೋಟೆ ಕಂದಕದ ಮೇಲೆ ಸೂಲಿಬೆಲೆ ರೋಡಿನಲ್ಲಿ 6, 14 ರೂಪಾಯಿ ಮುಟ್ಟಿಸಿ ಒಂದು ಕಬ್ಬಿಣದ ಸೇತುವೆ ಕಟ್ಟುವದು ಹಾಲಿ ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣವಿಲ್ಲವಾಗಿ ಅವಶ್ಯಕತೆ ಕಾಣುವದಿಲ್ಲವೆಂದು ಈ ಪ್ರಾಜೆಕ್ಟನ್ನು ಬಿಟ್ಟುಬಿಡುವ ವಿಚಾರದಲ್ಲಿ ಅಭಿಪ್ರಾಯ ತಿಳಿಸಬೇಕೆಂದೂ ಸದರಿ ಲೆಟರಿನ 2ನೆ ಪ್ಯಾರಾದಲ್ಲಿ ನಮ್ಮೂರಿಸಿರುವ ಮೇರೆ ಎರಡರ ಪ್ರಾಜೆಕ್ಟುಗಳ ಪೈಕಿ ಒಂದು ವಿಧವಾಗಿ ಮಾಡಲು ಅಭಿಪ್ರಾಯ ಪಡುವ ಪಕ್ಷ ಅರೀತಿ ಮಾಡಿಸಲು ಆರ್ಡರ್ ಮಾಡುವದಾಗಿ ಬರಿಸಿದ್ದು ಓದ ಲಾಯಿತು.

ಮೊಬಲಗು ಇತರ ಬಾಬುಗಳಿಗೆ ಅತಿ ಜರೂರಾಗಿ ಬೇಕಾಗಿರುತ್ತೆಯಾಗಿ ಭಾರಿ ಲಾಗೆವಡು ಇಟ್ಟು ಈ ಸೇತುವೆ ಕಟ್ಟುವ ದು ಸದ್ಯಕ್ಕೆ ನಿಲ್ಲಿಸಿಬಿಡಬಹುದೆಂತಲೂ ಬೇಸಿಗೆ ಕಾಲದಲ್ಲಿ ತಿರುಗಾಡುವದಕ್ಕೆ ಅನುಕೂಲವಾಗಿ ಒಂದು ಅಣೆ ಕಟ್ಟಬಹುದೆಂತಲೂ ತೀರ್ಮಾನಿಸಲಾಯಿತು.

ಮುಂದಿನ ಮೀಟಿಂಗು 1907ನೆ ಇಸವಿ ಫೆಬ್ರವರಿ 15ಕ್ಕೆ ನಡಿಯಬೇಕೆಂದು ತೀರ್ಮಾನಿಸಲಾಯಿತು.

ಹೆಚ್. ಹೆಚ್. ಸ್ಪಾರ್ಕ್ಸ್,
ಪ್ರಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮಾ. ತಾರೀಖು 25ನೆ ಜನವರಿ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿ ಹೆಬ್ಬಾಳು ಹೋಬಳಿಗೆ ಸೇರಿದ ಸರ್ವಮಾನ್ಯ ಬೊಮ್ಮನಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೃಷ್ಣರಾಜಪೇಟೆ ತಾಲ್ಲೂಕು ಕಛೇರಿಯಲ್ಲಿ 1907ನೆ ಮಾರ್ಚಿ ಮಾಹೆ 9ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 7ನೆ ಮಕ್ರುಂ 6ನೆ ನಂಬರ್ ಮೈಸೂರ ಗೆಜೆಟ್ಟಿನ IIನೆ ಭಾಗದ 42-43ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು 25ನೆ ಜನವರಿ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿಗೆ ಸೇರಿದ ಸರ್ವಮಾನ್ಯ ಲಕ್ಷ್ಮಿಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೃಷ್ಣರಾಜಪೇಟೆ ತಾಲ್ಲೂಕು ಕಛೇರಿಯಲ್ಲಿ 1907ನೆ ಮಾರ್ಚಿ 9ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 7ನೆ ಮಕ್ರುಂ 6ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 41-42ನೆ ನಂಬರ್ ಪೇಜು ನೋಡತಕ್ಕದ್ದು.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 25ನೆ ಜನವರಿ 1907ನೆ ಇಸವಿ.

ಅಲೂರು ಸಬ್ ತಾಲ್ಲೂಕು ಕುಂದೂರು ಹೋಬಳಿ ಜೋಡಿ ಸಮಸ್ತರಿಗೆ ಗ್ರಾಮವು ಜೋಡೀದಾರರು ನಾರಣಾಚಾರ್ರು ವ ಗೈರೇರಿಂದ ಬರತಕ್ಕ ಜೋಡಿ ಬಾಕಿಗೋಸ್ಕರವಾಗಿ 1907ನೆ ಇಸವಿ ಮಾರ್ಚಿ ಮಾಹೆ 18ನೆ ತಾರೀಖು ಸೋಮವಾರ ದಿವಿ 11 ಘಂಟೆ ಲಾಗಾಯಿತು ಕುಂದೂರು ವೊಕ್ಕಾಂನಲ್ಲಿ, ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪ ಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಜನವರಿ 31ನೆ ಮಕ್ರುಂ ಮೈಸೂರು ಗೆಜೆಟ್ಟಿನ IIನೆ ಭಾಗದ 30—31ನೆ ಪು ಟಗಳನ್ನು ನೋಡತಕ್ಕದ್ದು.

ಎಂ. ಎ. ನಾರಾಯಣಯ್ಯೆಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ತಾರೀಖು 8ನೆ ಫೆಬ್ರವರಿ-1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದ್ದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದ್ದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪುರು ವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.